ಕರ್ನಾಟಕ ವಿಧಾನ ಸಭೆ, ಸಂಶೋಧನಾ ಮತ್ತು ಉಲ್ಲೇಖನ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ : DEPARTMENT / SUBJECT: ಕೃಷಿ
ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ
ದಿನಾಂಕ : DATE:

## ಸಿರಿಧಾನ್ಯಗಳ ಉತ್ಪಾದನೆಗೆ ಕನಿಷ್ಠ ಬೆಂಬಲ ಬೆಲೆ | ಮುಖ್ಯಮಂತ್ರಿಗೆ ಎರಡು ವರದಿ ಸಲ್ಲಿಕೆ

# ಸ್ಥಳೀಯ ಧಾನ್ಯ ಖರೀದಿಗೆ ಕೃಷಿ ಆಯೋಗ ಶಿಫಾರಸು

■ ವಿಕ ಸುದ್ದಿಲೋಕ ಬೆಂಗಳೂರು

ರಾಜ್ಯ ಕೃಷಿ ಬೆಲೆ ಆಯೋಗವು ರಾಜ್ಯದಲ್ಲಿ ಪಡಿತರ ವಿತರಣೆಗೆ ಸ್ಥಳೀಯವಾಗಿಯೇ ಧಾನ್ಯ ಖರೀದಿಗೆ ಸಂಬಂಧಿಸಿ ಎರಡು ವರದಿಗಳನ್ನು ಸರಕಾರಕ್ಕೆ ಸಲ್ಲಿಸಿದೆ.

'ಕೇಂದ್ರ ಸರಕಾರದ ಕನಿಷ್ಠ ಬೆಂಬಲ ಬೆಲೆಯಲ್ಲಿ ಕೃಷಿ ಉತ್ಪನ್ನಗಳ ಖರೀದಿಯ ಪಸ್ತು ಸ್ಥಿತಿ ಮತ್ತು ಕರ್ನಾಟಕದಲ್ಲಿ ಸ್ಥಳೀಯ ಖರೀದಿಗೆ ಶಿಫಾರಸುಗಳು', ಮತ್ತು 'ರಾಜ್ಯದಲ್ಲಿ ಸಿರಿ ಧಾನ್ಯಗಳ ಉತ್ಪಾದನೆ ಮತ್ತು ಉತ್ಪಾದಕತೆಯ ವಿಶ್ಲೇಷಣೆ' ಎಂಬ ಎರಡು ವರದಿಗಳನ್ನು ಮುಖ್ಯಮಂತ್ರಿ ಯಡಿಯೂರಪ್ಪನವರಿಗೆ ಕೃಷಿ ಬೆಲೆ ಆಯೋಗದ ಅಧ್ಯಕ್ಷರಾದ ಹನುಮನ ಗೌಡ ಬೆಳಗುರ್ಕಿಯವರು ಸಲ್ಲಿಸಿದ್ದಾರೆ.

ರಾಜ್ಯದಲ್ಲಿ ವಾರ್ಷಿಕ 55 ಲಕ್ಷ ಟನ್ ಭತ್ತ, 13 ಲಕ್ಷ ಟನ್ ರಾಗಿ, 10 ಲಕ್ಷ ಟನ್ ಜೋಳವನ್ನು ಉತ್ಪಾದಿಸಲಾಗುತ್ತದೆ. ಕೇಂದ್ರದ ಆಹಾರ ಭದ್ರತೆ ಕಾಯಿದೆ ಅಡಿಯಲ್ಲಿ ಒಟ್ಟು 5.10 ಕೋಟಿ ಫಲಾನುಭವಿಗಳಿಗೆ ವಾರ್ಷಿಕ ಸುಮಾರು 30.38 ಲಕ್ಷ ಟನ್ ಆಹಾರ ಧಾನ್ಯವನ್ನು ವಿತರಿಸಲಾಗುತ್ತದೆ. ಇದಕ್ಕೆ ಪಡಿತರ ವ್ಯವಸ್ಥೆಗೆ ಅಗತ್ಯವಿರುವ ಆಹಾರ ಧಾನ್ಯಗಳನ್ನು ರಾಜ್ಯದ ರೈತರಿಂದಲೇ ಖರೀದಿಸಬಹುದು ಎಂದು ವರದಿ ತಿಳಿಸಿದೆ.

ರಾಜ್ಯದಲ್ಲಿ ಸಾರ್ವಜನಿಕ ಪಡಿತರ ವಿತರಣೆಗಾಗಿ ಆಹಾರ ಧಾನ್ಯಗಳ ಖರೀದಿಗೆ ಕೇಂದ್ರ ಸರಕಾರ 12,000 ಕೋಟಿ ರೂ. ಭರಿಸುತ್ತದೆ. ಆದರೆ ಬೇರೆ ರಾಜ್ಯಗಳ ಬದಲು ಇಲ್ಲಿಯೇ ಖರೀದಿಸಿದರೆ ರಾಜ್ಯದ ಆರ್ಥಿಕ ಬೆಳವಣಿಗೆ, ಉದ್ಯೋಗ ಸೃಷ್ಟಿಗೆ ಸಹಕಾರಿ ಎಂದು ವರದಿ ತಿಳಿಸಿದೆ.

ಈ ನಿಟ್ಟಿನಲ್ಲಿ, ರಾಜ್ಯದಲ್ಲಿ ಖರೀದಿ ಕೇಂದ್ರಗಳ ಸ್ಥಾಪನೆ ಮಾಡಬೇಕು. ಹಾಗೂ ಇದಕ್ಕಾಗಿ ಎಫ್‌ಪಿಒ, ಎಸ್‌ಎಚ್‌ಜಿ, ಎಪಿಎಂಸಿ ಇತ್ಯಾದಿಗಳ ಜಾಲವನ್ನು ಬಳಸಬಹುದು ಎಂದು ತಿಳಿಸಿದೆ.

ರಾಜ್ಯದಲ್ಲಿ ಜೋಳ, ರಾಗಿ, ಸಜ್ಜೆ ಮುಂತಾದ ಒರಟು ಧಾನ್ಯಗಳ ಜತೆಗೆ ನವಣೆ, ಸಾಮೆ, ಬರಗು, ಊದಲು, ಹಾರಕ, ಕೊರಲೆಗಳಂತಹ ಪೌಷ್ಟಿಕಾಂಶಯುಕ್ತ ಸಿರಿ ಧಾನ್ಯಗಳನ್ನು ಬೆಳೆಯಲಾಗುತ್ತದೆ. ಒಟ್ಟಾರೆ 61,000 ಹೆಕ್ಟೇರ್ ಪ್ರದೇಶಗಳಲ್ಲಿ ಸುಮಾರು 42,000 ಟನ್ ಸಿರಿಧಾನ್ಯಗಳನ್ನು ಉತ್ಪಾದಿಸಲಾಗುತ್ತದೆ. ರಾಜ್ಯದಲ್ಲಿ ಸಿರಿಧಾನ್ಯಗಳ ವಿಸ್ತೀರ್ಣ ಹೆಚ್ಚಿಸಲು, ರೈತರಿಗೆ ಉತ್ತೇಜನ ಅಗತ್ಯ. ಕೇಂದ್ರ ಸರಕಾರ ಸಿರಿ ಧಾನ್ಯಗಳಿಗೆ ಕನಿಷ್ಠ ಬೆಂಬಲ ಬೆಲೆ ನೀಡದಿರುವುದರಿಂದ ರಾಜ್ಯ ಸರಕಾರವೇ ನೀಡಬಹುದು. ಪ್ರತಿ ಕ್ವಿಂಟಾಲ್‌ಗೆ 4,500 ರೂ.ಗಳಿಂದ 5,000 ರೂ. ತನಕ ಕನಿಷ್ಠ ಬೆಂಬಲ ಬೆಲೆ ನೀಡಬಹುದು. ರೈತರಿಂದ ಸಿರಿಧಾನ್ಯಗಳನ್ನು ನೇರವಾಗಿ ಖರೀದಿಸಿ ಶಾಲಾ ಮಕ್ಕಳಿಗೆ ಬಿಸಿಯೂಟ, ಗರ್ಭಿಣಿ, ಬಾಣಂತಿಯರಿಗೆ ಸಿರಿಧಾನ್ಯ ಆಹಾರ ಕಿಟ್‌ಗಳನ್ನು ವಿತರಿಸುವ ಮೂಲಕ ಆಹಾರ ಭದ್ರತೆ ಜತೆಗೆ ಪೌಷ್ಟಿಕ ಆಹಾರವನ್ನೂ ಒದಗಿಸಿದಂತಾಗುತ್ತದೆ ಎಂದು ಶಿಫಾರಸು ಸಲ್ಲಿಸಲಾಗಿದೆ.



■ ಪಡಿತರ ವಿತರಣೆಗೆ ರಾಜ್ಯದ ರೈತರಿಂದಲೇ ಖರೀದಿ
■ ವಾರ್ಷಿಕ 12,000 ಕೋಟಿ ರೂ. ವಹಿವಾಟು ನಿರೀಕ್ಷೆ
■ ಬೇರೆ ರಾಜ್ಯಗಳ ಬದಲು ಕರ್ನಾಟಕದಲ್ಲೇ ಖರೀದಿಸಿ
■ ಬಿಸಿಯೂಟ ಸೇರಿ ಸಮಾಜಿಕ ಯೋಜನೆಗಳಿಗೆ ಬಳಕೆ

ಹೊಸದಿಲ್ಲಿ: ರಾಷ್ಟ್ರೀಯ ಆಹಾರ ಭದ್ರತಾ ಕಾಯಿದೆಅನ್ವಯ ಗ್ರಾಮೀಣ ಮತ್ತು ನಗರಗಳ ಪಡಿತರ ವ್ಯಾಪ್ತಿಯನ್ನು ಕಡಿತಗೊಳಿಸಿ ಸಬ್ಸಿಡಿಯನ್ನು ಸರಕಾರ ಉಳಿಸಬಹುದು. ಸರಕಾರದ ಬೊಕ್ಕಸಕ್ಕೆ ವಾರ್ಷಿಕ 47,229 ಕೋಟಿ ರೂ. ಉಳಿತಾಯವಾಗಲಿದೆ ಎಂದು ನೀತಿ ಆಯೋಗವು ಕೇಂದ್ರ ಸರಕಾರಕ್ಕೆ ಶಿಫಾರಸು ಮಾಡಿದೆ.

ಗ್ರಾಮೀಣ ಭಾಗಗಳಲ್ಲಿನ ಶೇ.75 ಜನಸಂಖ್ಯೆಗೆ ನೀಡುವ ಪಡಿತರದ ವ್ಯಾಪ್ತಿಯನ್ನು ಶೇ.60ಕ್ಕೆ, ನಗರ ಪ್ರದೇಶದಲ್ಲಿನ ವ್ಯಾಪ್ತಿಯನ್ನು ಶೇ.50ರಿಂದ 40ಕ್ಕೆ ಇಳಿಸಬಹುದು. ಇದರಿಂದ ಸಾಕಷ್ಟು ಸಬ್ಸಿಡಿ ಉಳಿತಾಯವಾಗಲಿದೆ ಎಂದು ಆಯೋಗವು ಹೇಳಿದೆ. ಪ್ರಸ್ತುತ, ಎನ್‌ಎಫ್‌ಎಸ್‌ಎ ವ್ಯಾಪ್ತಿಯಡಿ ದೇಶದ 67% ಜನರಿಗೆ ಪಡಿತರವನ್ನು ನೀಡಲಾಗುತ್ತಿದೆ.

ನೀತಿ ನಿರೂಪಣೆಗೆ ಸಂಬಂಧಿಸಿದ ವರದಿಯಲ್ಲಿ ಈ ಅಂಶಗಳನ್ನು ನೀತಿ ಆಯೋಗವು ಪ್ರಸ್ತಾಪಿಸಿದೆ. ಎನ್‌ಎಫ್‌ಎಸ್‌ಎ ಅನ್ವಯ ಅಂತ್ಯೋದಯ ಅನ್ನ ಯೋಜನೆ ರೂಪಿಸಲಾಗಿದ್ದು, ತಿಂಗಳಿಗೆ ಬಡ ಕುಟುಂಬಕ್ಕೆ 35 ಕೆ.ಜಿ ಆಹಾರ ಧಾನ್ಯ ನೀಡಲಾಗುತ್ತದೆ. ಮಾಧ್ಯಮ ವರದಿಗಳ ಪ್ರಕಾರ, ನೀತಿ ಆಯೋಗದ ಶಿಫಾರಸುಗಳನ್ನು ಸಂಬಂಧಪಟ್ಟ ಇಲಾಖೆಗಳಿಗೆ ಕಳಿಸಲಾಗಿದೆ.

## ಪಡಿತರ ಕಡಿತಕ್ಕೆ ನೀತಿ ಆಯೋಗ ಶಿಫಾರಸು

ನವದೆಹಲಿ: ರಾಷ್ಟ್ರೀಯ ಆಹಾರ ಭದ್ರತಾ ಕಾಯಿದೆ ಅಡಿ ಗ್ರಾಮೀಣ ಮತ್ತು ನಗರದ ಪಡಿತರ ವ್ಯಾಪ್ತಿಯನ್ನು ಕಡಿತಗೊಳಿಸುವ ಮೂಲಕ ಸರ್ಕಾರದ ಬೊಕ್ಕಸಕ್ಕೆ ವಾರ್ಷಿಕ 47,229 ಕೋಟಿ ರೂ. ಉಳಿತಾಯ ಮಾಡಬಹುದು ಎಂದು ನೀತಿ ಆಯೋಗ ಶಿಫಾರಸು ಮಾಡಿದೆ. ಗ್ರಾಮೀಣ ಭಾಗಗಳಲ್ಲಿ ಶೇ.75 ಜನಸಂಖ್ಯೆಗೆ ನೀಡುವ ಪಡಿತರ ವ್ಯಾಪ್ತಿಯನ್ನು ಶೇ.60ಕ್ಕೆ, ನಗರ ಪ್ರದೇಶದಲ್ಲಿನ ವ್ಯಾಪ್ತಿಯನ್ನು ಶೇ.50ರಿಂದ 40ಕ್ಕೆ ಇಳಿಸಬಹುದು ಎಂದು ಆಯೋಗ ಹೇಳಿದೆ.